

ಕಡೆಗೂ ಇನ್ನೊಮ್ಮೆ ತನ್ನ ಮುಂದೆಯೆ ಬಂದು ಬಿದ್ದಿರುವ ಎಳೆ ಬಿಸಿಲುಕೋಲಿನೆಡೆಗೂ ನೋಡುತ್ತಾ ಗೊಂದಲವಲ್ಲದ ಗೊಂದಲದಲ್ಲಿ ಮುಳುಗುತ್ತಿದ್ದ. ಮೇಷ್ಟ್ರು ಆದಾಗ ತಾನೆ ಬರೆದಿದ್ದ ಬಿಸಿಯಾದ ದೊಡ್ಡ ಸಾಲೊಂದನ್ನು ಓದಲು ಮೂರ್‍ನಾಲ್ಕು ಸಲ ಪ್ರಯತ್ನಿಸಿ ವಿಫಲನಾಗಿದ್ದ. ಸ... ಸ... ಸ್ವ... ಸ್ವಾ... ತ... ಹೀಗೆ ಹೇಳಿಕೊಂಡು ಮುಂದಿನದು ಬರದೆ ಹೆಣಗಿದ್ದ. ಓದಲು ಕಷ್ಟವಿರುವ ಪದದ ಅರ್ಥವಾದರೂ ಅದೆಷ್ಟು ಕಷ್ಟವಿರಬಹುದೆಂದು ಬಗೆದು ಕಣ್ಣುಗಳಲಿ ಬೆರಗು ಚೆಲ್ಲುತ್ತಿದ್ದ. ಕಪ್ಪುಹಲಗೆಯ ಮೇಲಿದ್ದ 'ಸ್ವಾತಂತ್ರ್ಯ ದಿನಾಚರಣೆ' ಎಂಬ ಪದ ತನ್ನ ಉಚ್ಚಾರಣೆಯ ಪಟ್ಟು ಬಿಟ್ಟುಕೊಡದೆ ಪರಸುನನ್ನು ನೋಡಿ ಮೆಲ್ಲಗೆ ನಗುತ್ತಿತ್ತು.

ಮಕ್ಕಳ ಗುಜುಗುಜು ಸದ್ದಿಗೆ ಬ್ರೇಕ್ ಹಾಕುವ ಪ್ರಯತ್ನದಲಿ ಶಿಕ್ಷಕರೊಬ್ಬರು ತೊಡಗಿದ್ದರು. ಎಲ್ಲಾ ಮಕ್ಕಳನ್ನು ಒಟ್ಟಿಗೆ ಸೇರಿಸಿದಾಗ ಆಗುವ ಸದ್ದನ್ನು ನಿಯಂತ್ರಿಸುವ ಕೆಲಸ ಸಣ್ಣದಲ್ಲ. ಕೈಯಲ್ಲಿ ಹುಸಿ ಬೆತ್ತ ಹಿಡಿದು ಹಾಗೆ ಮಕ್ಕಳ ಮಧ್ಯೆ ಬಂದು ಬಂದು